ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೆ, ನಾನು ಉತ್ತರದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದೇನೆ. ಈ ಬಗ್ಗೆ ಯಾವುದೇ ರೀತಿಯ ದೂರುಗಳು ಸರ್ಕಾರಕ್ಕೆ ಬಂದಿಲ್ಲ. ಇಲ್ಲಿಯ ಲೆಕ್ಕ ಪತ್ರಗಳನ್ನು ಅಕೌಂಟೆಂಟ್ ಜನರಲ್ ಕಛೇರಿಯವರೂ ಸಹಾ ಪರಿಶೀಲಿಸುತ್ತಾರೆ. ಪರಿಷತ್ತಿನಲ್ಲೂ ಸಹಾ ಚಾರ್ಟರ್ಡ್ ಅಕೌಂಟೆಂಟ್‌ಗಳು ಲೆಕ್ಕವನ್ನು ಪರಿಶೀಲನೆ ಮಾಡುತ್ತಾರೆ. ಎಷ್ಟು ಖರ್ಚು ಮಾಡಲಾಗಿದೆ ಎಂಬುದನ್ನೆಲ್ಲಾ ಸರ್ಕಾರಕ್ಕೆ ವರದಿಯನ್ನು ಕಳುಹಿಸುತ್ತಾರೆ. ಸುಮ್ಮ ಸುಮ್ಮನೆ ಪರಿಷತ್ತಿನಲ್ಲಿ ಹಣದ ದುರುಪಯೋಗವಾಗಿದೆಯೆಂದು ಹೇಳಿದರೆ ಅದು ತಪ್ಪಾಗುತ್ತದೆ. ಯಾರೋ ಅನಾವಿಕರು ದೂರು ಕೊಟ್ಟರೆ ಎಲ್ಲವನ್ನೂ ಪರಿಶೀಲಿಸಲಾಗುವುದಿಲ್ಲ. ನಿರ್ದಿಷ್ಟವಾದ ವ್ಯಕ್ತಿ ಈ ಬಗ್ಗೆ ದೂರನ್ನು ಕೊಟ್ಟರೆ ಆ ಬಗ್ಗೆ ಸರ್ಕಾರ ವಿಚಾರಣೆಮಾಡಿ ವರದಿಯನ್ನು ಸಭೆಯ ಮುಂದೆ ಇಡಲಾಗುತ್ತದೆ.

ಶ್ರೀ ಎಸ್. ಲಿಂಗಯ್ಯ.—ನನ್ನ ವೈಯುಕ್ತಿಕ ದೃಷ್ಟಿಯಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಾ ಇಲ್ಲ. ಕನ್ನಡ ಸಾಹಿತ್ಯವನ್ನು ರಕ್ಷಿಸಬೇಕೇ ವಿನಃ ಯಾರೂ ಅದನ್ನು ಭಕ್ಷಿಸುವ ಕೆಲಸವನ್ನು ಮಾಡಬಾರದು. ಈ ದೃಷ್ಟಿಯಿಂದ ನಾನು ಪ್ರಶ್ನೆ ಕೇಳುತ್ತಿದ್ದೇನೆ. ನನ್ನ ಹಿತಕ್ಕಾಗಿ ಅಲ್ಲ. ಬಂಡಾಯ ಸಾಹಿತ್ಯದ ಅಭಿಪ್ರಾಯವೂ ಕೂಡ ಅದೇ ಆಗಿದೆ. ಅವರು ಕನ್ನಡ ಸಾಹಿತ್ಯದ ಬಗ್ಗೆ, ಕನ್ನಡ ಕುಲ ಕೋಟಿಯ ಬಗ್ಗೆ ಅಭಿಮಾನ ಇರತಕ್ಕ ಜನರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದರ ವಿಚಾರವಾಗಿ ಏನಾದರೂ ಇದ್ದರೆ ಮತ್ತೆ ಬೇಕಾದರೆ ತಿಳಿಸುತ್ತೇನೆ. ಪತ್ರಿಕೆಗಳಲ್ಲಿ ಈ ಬಗ್ಗೆ ಪ್ರಕಟವಾಗಿರುವ ಕಟಿಂಗ್ಸ್ ಏನಿದೆ ಅವನ್ನು ಕಳುಹಿಸುತ್ತೇನೆ. ಸರ್ಕಾರ ಕೊಟ್ಟ ಹಣ ಸದ್ವಿನಿಯೋಗ ಆಗುವ ರೀತಿಯಲ್ಲಿ ಅದು ಖರ್ಚು ಆಗುತ್ತಾ ಇದೆಯೇ ಇಲ್ಲವೇ ಎಂಬ ಬಗ್ಗೆ ಎಚ್ಚರ ವಹಿಸಬೇಕಾದು ಸರ್ಕಾರದ ಕರ್ತವ್ಯ ಇದೆ. ಈ ಬಗ್ಗೆ ಎಚ್ಚರಿಕೆ ಸರ್ಕಾರದಲ್ಲಿ ಇರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ. ರಾಮ್‌ದೇವ್.—ತಾವು ಹಣವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಿಗಾಗಿ ಕೊಡುತ್ತಿದ್ದೀರಿ. ಕನ್ನಡ ಸಾಹಿತ್ಯ ಪರಿಷತ್ತು ನಾಡು ನುಡಿ, ಜನ ಸೇವೆಗೆ ಇರತಕ್ಕ ಒಂದು ಸಂಸ್ಥೆ. ಆದರೆ ಇಷ್ಟೊಂದು ಹಣವನ್ನು ಇದಕ್ಕೆ ಕೊಟ್ಟು ಅದು ಕೇವಲ ಸರ್ಕಾರದ ಸೇವೆಗೆ ಇರತಕ್ಕ ಸಂಸ್ಥೆ ಆಗಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಗುಂಡೂರಾವ್.—ಅದು ಸರ್ಕಾರಿ ಸಂಸ್ಥೆ ಆಗಿಲ್ಲ. ಕನ್ನಡದ ಅಭಿವೃದ್ಧಿ ಮಾಡುವ ಸಂಸ್ಥೆಯಾಗಿದೆ.

Expansion Scheme of Malaprabha Co-operative Sugar Factory

596 SRI R. C. BALEKUNDARGI (Bailahongal)—Will the Minister for Co-operation be pleased to state;—

(*a*) The number of contractors who have submitted their tenders for the works to be taken up under the extension scheme of the Malaprabha Co-operative Sugar Factory of Bailahongal Taluk; (Details may please be furnished)

(*b*) the total amount of each tender?

SRI A. B. JAKANUR.—(Minister for Co-operation).

(*a*) In all the following three contractors have submitted their tenders of extension work of the Malaprabha Co-operative Sugar Factory's main building which is to be executed under the extension programme.

1. M/s. Indian Structural and Conveyars Private Ltd. Bangalore
2. M/s. Hindustan Engineering Works, Hubli.
3. M/s. M.K. Constructions. Sankeswar.

(*b*) The amount of each tender is as follows. —

	Name of Tender	*Amount of Tender*
1	M/s. Indian Structural and Conveyars Private Ltd., Bangalore.	Rs. 27,17,891-05 31,7% more than the estimated cost.
2	M/s. Hindustan Engineering Works, Hubli.	Rs. 22,53, 553-00 29% more than the estimated cost.
3	M/s. M. K. Construction Sankeswar	Rs. 26,54, 240-00 29% more than the estimated cost.

ಶ್ರೀ ಆರ್. ಸಿ. ಬಾಳೆಕುಂದರಗಿ —ತಮ್ಮ ಉತ್ತರದಲ್ಲಿ ೩ ಟೆಂಡರ್‌ಗಳು ಬಂದಿವೆಯೆಂದು ಹೇಳುತ್ತಿದ್ದೀರಿ. ಇವುಗಳಲ್ಲಿ ಯಾವ ಸಂಸ್ಥೆಗೆ ಕಾಂಟ್ರಾಕ್ಟ್ ಪಹಿಸಿದ್ದೀರಿ?

ಶ್ರೀ ಎ. ಬಿ. ಜಕನೂರ್ — ಮೆ, ಇಂಡಿಯನ್ ಸ್ಟ್ರಕ್ಚರಲ್ಸ್ ಅಂಡ್ ಕಂಸ್ಟ್ರಿಯರ್ಸ್ ಪ್ರೈವೇಟ್ ಲಿ. ಬೆಂಗಳೂರು ಇವರಿಗೆ ಪಹಿಸಲಾಗಿದೆ.

ಶ್ರೀ ಆರ್. ಸಿ. ಬಾಳೆಕುಂದರಗಿ.—ಈ ಸಂಸ್ಥೆಯ ಪಾಲುದಾರರ ಹೆಸರುಗಳು ಏನು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎ. ಬಿ. ಜಕನೂರ್.—ಇದರಲ್ಲಿ ಸಂಸ್ಥೆಯ ಪಾಲುದಾರರ ಹೆಸರು ಇಲ್ಲ.

ಶ್ರೀ ಆರ್. ಸಿ. ಬಾಳೆಕುಂದರಗಿ.—ಈಗ ತಾವು ೩ ಟೆಂಡರ್‌ಗಳು ಬಂದಿವೆ ಎಂದು ಹೇಳಿದ್ದೀರಿ. ಇಲ್ಲಿ ೨೨ಲಕ್ಷ ಹಾಗೂ ೨೬ಲಕ್ಷ ರೂಪಾಯಿಗಳಿಗೆ ತಾವು ಕಾಂಟ್ರಾಕ್ಟ್ ಕೊಡದೆ ಅತಿ ಹೆಚ್ಚಿನ ಮೊತ್ತವನ್ನು ಸೂಚಿಸಿದವರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದೀರಿ, ಇದರಲ್ಲಿ ರಾಜಕೀಯದ ಪ್ರಭಲವಾದ ಕಾರಣ ಇದೆ. ಆ ರಾಜಕೀಯ ವ್ಯಕ್ತಿಯ ಹೆಸರು ನನಗೆ ಗೊತ್ತು.

ಶ್ರೀ ಎ. ಬಿ. ಜಕನೂರ್.—ಹಾಗಿದ್ದರೆ ಹೆಸರನ್ನು ಹೇಳಿ?

ಶ್ರೀ ಆರ್. ಸಿ. ಬಾಳೆಕುಂದರಗಿ.—ಅದನ್ನು ನಾನು ಕನ್‌ಫರ್ಮ್ ಮಾಡಿಕೊಳ್ಳಬೇಕಾಗಿದೆ. ಈ ಸಂಸ್ಥೆ ನಮ್ಮ ಜಿಲ್ಲೆಯಲ್ಲಿ ಇರುವುದರಿಂದ ಹಾಗೂ ಈ ಬಗ್ಗೆ ನೂರಾರು ಜನರು ಪತ್ರ ಬರೆದಿರುವುದರಿಂದ ನಾನು ಈ ಪ್ರಶ್ನೆಯನ್ನು ಹಾಕಿದ್ದೇನೆ. ಮಾನ್ಯ ಸಹಕಾರ ಮಂತ್ರಿಗಳು ಈ ಬಗ್ಗೆ ಉತ್ತರವನ್ನು ಕೊಡಬೇಕು. ಈ ಬಗ್ಗೆ ನಾನು ಮಂತ್ರಿಗಳಿಗೆ ಭೇಟಿಯಾಗಿ ಎಲ್ಲವನ್ನೂ ಹೇಳಿದ್ದೇನೆ. ಇದರಲ್ಲಿ ನಿಗಾ ಇಡಬೇಕೆಂದು ಹೇಳಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಸ್ತರಣಾಯೋಜನೆಗೆ ತಡೆ ಆಜ್ಞೆಯನ್ನೇನಾದರೂ ಕೊಟ್ಟಿದ್ದಾರೆಯೇ?

ಶ್ರೀ ಎ. ಬಿ ಜಕನೂರ್, —ಇಲ್ಲಿ ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ವಿಸ್ತರಣೆ ಯೋಜನೆ ಹಾಕಿಕೊಂಡಿದ್ದು ಕಾಂಟ್ರಾಕ್ಟರುದಾರರಿಂದ ಟೆಂಡರ್‌ಗಳನ್ನು ಕರೆಯಲಾಗಿತ್ತು. ಈ ಯೋಜನೆಗೆ ನೆಟ್ ೨೦,೬೦,೬೦೦ ರೂಪಾಯಿಯ ಹಾಗೂ ಗ್ರಾಸ್ ೨೨,೫೦,೨೦೦ ರೂಪಾಯಿಯ ಅಂದಾಜನ್ನು ಬೊಂಬಾಯಿಯ ಆರ್ಟಿಟೆಕ್ಟ್‌ನವರು ಸೂಚಿಸಿದ್ದರು. ಈ ಆಧಾರದ ಮೇಲೆ ಟೆಂಡರ್ ಕರೆಯಲಾಗಿ ಮೆ. ಇಂಡಿಯನ್ ಸ್ಟ್ರಕ್ಚರಲ್ಸ್ ಅಂಡ್ ಕನ್ಸ್ಟ್ರಿಯರ್ಸ್ ಪ್ರೈವೇಟ್ ಲಿ, ಬೆಂಗಳೂರು, ಮೆ. ಹಿಂದೂಸ್ಥಾನ ಇಂಜಿನಿಯರಿಂಗ್ ವರ್ಕ್ಸ್, ಹುಬ್ಬಳ್ಳಿ ಮತ್ತು ಮೆ. ಎಮ್. ಕೆ. ಕನ್ಸ್ಟ್ರಕ್ಷನ್. ಸಂಕೇಶ್ವರ, ಈ ಮೂರು ಸಂಸ್ಥೆಗಳಿಂದ ಟೆಂಡರ್ ಬಂದಿದ್ದವು. ಇವರು ಹಾಕಿದ್ದ ಟೆಂಡರ್ಸ್ ನೋಡಿ ಇನ್ನೂ ಕಡಿಮೆಗೆ ಯಾರು ಬರುತ್ತಾರೆಂದು ಕರೆದರು. ಆ ಕಾಲಕ್ಕೆ ಕಡಿಮೆಗೆ ಬಂದರೆ ಪ್ರತಿ ಶತ ೯.೬ರಷ್ಟು ಅಂದಾಜಿಗೆ ಮೆ.

ಹಿಂದೂಸ್ಥಾನ ಇಂಜಿನಿಯರಿಂಗ್ ವರ್ಕ್ಸ್, ಹುಬ್ಬಳ್ಳಿಯವರು ಹೋದರು. ಅವರನ್ನು ಕೇಳಿದಾಗ ಅವರಿಗೆ ಉಕ್ಕಿನದರ ಜಾಸ್ತಿಯಾಗಿದೆಯೆಂದು, ಅವರು ನಿರ್ದಿಷ್ಟಪಡಿಸಿದ ವೇಳೆಯೊಳಗೆ ಕೆಲಸವನ್ನು ಪೂರೈಸುವುದರ ಬಗ್ಗೆ ಸಂಶಯ ವ್ಯಕ್ತಪಡಿಸಿ ಅಸಮರ್ಥತೆಯನ್ನು ತಿಳಿಸಿದರು ಮತ್ತು ಅವರಿಗೆ ಅನುಭವ ಕೂಡಾ ಬಹಳ ಕಡಿಮೆ ಇತ್ತು. ಇವರು ೧೯೭೧ನೇ ಇಸವಿಯಲ್ಲಿ ಒಂದು ಕೆಲಸವನ್ನು ಮಾಡಿದ್ದರು. ಇವರು ೨.೫ ಲಕ್ಷ ರೂಪಾಯಿಯ ಕೆಲಸ ಮಾಡಿದ್ದಾರೆ. ಸ್ಟೀಲ್ ಕಟಕಿ ಹಾಗೂ ಗೇಟುಗಳನ್ನು ಇಡಿಸುವ ಇಂತಹ ಕೆಲಸ ಮಾಡಿದ್ದರು. ಸಕ್ಕರೆ ಕಾರ್ಖಾನೆಯ ಕೆಲಸವನ್ನು ಇವರು ಯಾರೂ ಮಾಡಿರಲಿಲ್ಲ. ಆದುದರಿಂದ ಇವರ ಟೆಂಡರ್ ಕೈಬಿಡಲಾಯಿತು. ಉಳಿದ ಎರಡನೆಯವರು ಮೆ. ಎಂ ಕೆ. ಕನ್ಸಟ್ರಕ್ಷನ್, ಸಂಕೇಶ್ವರ ಇವರು ಸರಾಸರಿ ೨೯ರಷ್ಟು ಅಂದಾಜನ್ನು ತೋರಿಸಿದ್ದು ಅವರು ಸರಾಸರಿ ೨೬ಕ್ಕಿಂತ ಕಡಿಮೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಮತ್ತೊಬ್ಬರು ೩೧ ಪರ್‌ಸೆಂಟ್ ಸೂಚಿಸಿದ್ದವರು ಸರಾಸರಿ ೨೬ಕ್ಕೆ ಮಾಡುತ್ತೇವೆಂದು ಹೇಳಿದರು. ಇವರು ಘಟಪ್ರಭಾ ಸಕ್ಕರೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿದ್ದಾರೆ, ಹಾವೇರಿ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಬಹಳಷ್ಟು ಅನುಭವ ಇರುವುದರಿಂದ ಮತ್ತು ನಿರ್ದಿಷ್ಟಪಡಿಸಿದ ಮಿತಿಯೊಳಗೆ ಕೆಲಸವನ್ನು ಪೂರೈಕೆ ಮಾಡಿಕೊಡಲು ಒಪ್ಪಿದ್ದರಿಂದ ಬೋರ್ಡ್ ಆಫ್ ಮೇನೆಜ್‌ಮಂಟ್ ಇವರ ಟೆಂಡರನ್ನು ಒಪ್ಪಿಕೊಂಡರು. ಒಪ್ಪಿಕೊಂಡ ನಂತರ ಅವರು ಕೆಲಸವನ್ನು ಶುರು ಮಾಡಿದರು.

ಅಧ್ಯಕ್ಷರು.—ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಡಿ. ವೇಳೆ ಬಹಳ ಕಡಿಮೆ ಇದೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಇಲ್ಲಿ ೬ ಲಕ್ಷ ರೂಪಾಯಿಯನ್ನು ಹೊಡೆಯಲಾಗಿದೆ. ಆದ್ದರಿಂದ ಈ ಬಗ್ಗೆ ಅಧ್ಯಕ್ಷರು ಸ್ವಲ್ಪ ಜಾಸ್ತಿ ಕಾಲವನ್ನು ಕೊಡಬೇಕು.

ಶ್ರೀ ಎ. ಬಿ. ಜಕನೂರ್.—ಇಲ್ಲಿ ಅವ್ಯವಹಾರ ನಡೆದಿದೆ ಎಂದು ಇದನ್ನು ಸ್ವಲ್ಪ ಪರಿಶೀಲಿಸಬೇಕೆಂದು ಮಾನ್ಯ ಸದಸ್ಯರು ನನಗೆ ಹೇಳಿದ್ದರು. ಡೈರೆಕ್ಟರ್ ಆಫ್ ಶುಗರ್, ಅವರಿಗೆ ಹೇಳಿ ತಡೆ ಮಾಡಿಸಿದೆ. ಆ ನಂತರ ಚೌಕಾಶಿ ಮಾಡಲಾಗಿ ಹಾಗೂ ಮತ್ತೆ ಟೆಂಡರ್ ಕರೆದೆರೆ ರೇಟಾಫ್ ಕಾಂಟ್ರಾಕ್ಟ್ ಜಾಸ್ತಿಯಾಗುತ್ತದೆಂದು ಹಾಗೂ ಕೆಲಸದಲ್ಲಿ ಡಿಲೇ ಆಗುತ್ತದೆಂದು ಅವರಿಗೇ ಕೆಲಸವನ್ನು ಮಾಡಲು ತಿಳಿಸಲಾಯಿತು, ಅವರು ಕೆಲಸವನ್ನು ನಿರ್ವಹಿಸುತ್ತಿದ್ದು ಇದು ಸೆಪ್ಟಂಬರ್ ೩೦ ರೊಳಗೆ ಮುಗಿಯಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಟೆಂಡರ್‌ಗಳನ್ನು ಕರೆಯುವ ಕಾರಣ ಏನು? ಟೆಂಡರನ್ನು ಯಾರು ಕಡಿಮೆಗೆ ಹಾಕಿಕೊಂಡಿರುತ್ತಾರೋ ಅವರಿಗೆ ವರ್ಕ್ ಆರ್ಡರ್ ಕೊಡಬೇಕಾಗುತ್ತದೆ. ಇಲ್ಲಿ ಆ ರೀತಿ ಮಾಡದಿರುವುದಕ್ಕೆ ಪ್ರಭಲವಾದ ಕಾರಣ ಏನು? ಇಲ್ಲಿ ಮೂರು ಜನರಿಂದ ಟೆಂಡರ್ ಬಂದಿದ್ದು, ಇಲ್ಲಿ ಕ್ಷ.ಟ ಸರಾಸರಿಯನ್ನು ಯಾರು ಸೂಚಿಸಿದ್ದರು ಅವರಿಗೆ ತಾವು ಕೆಲಸವನ್ನು ಅಲಾಟ್ ಮಾಡಬೇಕಾಗಿತ್ತು. ಅವರಿಗೆ ವರ್ಕ್‌ಆರ್ಡರ್ ಕೊಟ್ಟ ಮೇಲೆ ಅವರು ನಿಯಮದಂತೆ ಕೆಲಸವನ್ನು ಪೂರೈಸದಿದ್ದರೆ ಅವರ ಟೆಂಡರ್ ಡಿಪಾಸಿಟ್ ನಿಮ್ಮ ಬಳಿಯೇ ಇರುತ್ತಿತ್ತು. ಆ ಬಗ್ಗೆ ಕ್ರಮ ತೆಗೆದುಕೊಳ್ಳಬಹುದಿತ್ತು. ಆ ನಂತರ ಬೇರೆಯವರಿಗೆ ಕೆಲಸ ವಹಿಸಬಹುದಿತ್ತು. ಇಲ್ಲಿ ಅವರಿಗೆ ನೆಗೋಷಿಯೇಟ್ ಮಾಡುವುದಕ್ಕೆ ಕಾರಣ ಏನು? ಇನ್ನು ಎರಡನೆಯದಾಗಿ ಇಲ್ಲಿ ಮೆ. ಇಂಡಿಯನ್ ಸ್ಟ್ರಕ್ಚರಲ್ಸ್ ಅಂಡ್ ಕನ್ಸ್ಟ್ರಿಯರ್ಸ್ ಪ್ರೈವೇಟ್ ಲಿ. ಬೆಂಗಳೂರು ಇವರಿಗೆ ಕೆಲಸ ಕೊಟ್ಟಿದ್ದೀರಿ. ಈ ಸಂಸ್ಥೆಯಲ್ಲಿ ಯಾರು ಯಾರು ಪಾಲುದಾರರು ಇದ್ದಾರೆ ಎಂಬುದರ ಬಗ್ಗೆ ತಾವು ಈ ಕ್ಷಣದಲ್ಲಿ ಉತ್ತರವನ್ನು ಒದಗಿಸಲು ಆಗದಿದ್ದಲ್ಲಿ ಪಕ್ಷದಲ್ಲಿ ಮುಂದಾದರೂ ಅವರುಗಳ ಹೆಸರುಗಳನ್ನು ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎ. ಬಿ. ಜಕ್ಕನೂರು.—ಟೆಂಡರ್ ಕರೆದನಂತರ ಎಷ್ಟೋ ಜನರು ಟೆಂಡರ್‌ಗಳನ್ನು ಹಾಕುತ್ತಾರೆ. ಇದರಲ್ಲಿ ಅನುಭವ ಇರುವವರು ಇಲ್ಲದವರು ಸಮರ್ಥರು, ಅಸಮರ್ಥರು ಎಲ್ಲರೂ ಟೆಂಡರ್‌ಗಳನ್ನು ಹಾಕುತ್ತಾರೆ. ಆದರಲ್ಲಿ ಯಾರು ಅನುಭವ ಉಳ್ಳವರು ಇರುತ್ತಾರೋ ಅಂಥವರಿಗೆ ಮಾತ್ರ ಟೆಂಡರನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಈಗಾಗಲೇ ಈ ಪ್ರಶ್ನೆಗೆ ಮಾನ್ಯ ಸದಸ್ಯರು ಬಹಳಷ್ಟು ವೇಳೆ ತೆಗೆದುಕೊಂಡಿರುವುದರಿಂದ ಕೊನೆಯದಾಗಿ ಸಪ್ಲಿಮೆಂಟರಿಯನ್ನು ಕೇಳಿ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಸಿ. ಬಾಳೆಕುಂದರಗಿ.—ಮಾನ್ಯ ಅಧ್ಯಕ್ಷರೇ ಈ ಯೋಜನೆಗೆ ಸಾರ್ವಜನಿಕರು ಹಣವನ್ನು ತೊಡಗಿಸಿರುವಂಥದ್ದಾಗಿರುತ್ತದೆ, ಈ ಮನೆಯ ಸದಸ್ಯನಾಗಿ ನಾನು ಪ್ರಶ್ನೆಯನ್ನು ಹಾಕಿರುತ್ತೇನೆ. ಆ ಪ್ರಶ್ನೆಯು ಈ ಮನೆಯ ಮುಂದೆ ಇರುವಾಗ ಮಾನ್ಯ ಸಚಿವರು ತರಾತುರಿಯಿಂದ ಫ್ಯಾಕ್ಟರಿಯನ್ನು ತೆಗೆಯುವ ಸಲುವಾಗಿ ಸ್ಟೇ ವೆಕೇಟ್ ಮಾಡುವುದಕ್ಕೆ ಪ್ರಯತ್ನ ನಡೆಸಿದುದಕ್ಕೆ ಕಾರಣವೇನು?

ಶ್ರೀ ಎ. ಬಿ. ಜಕ್ಕನೂರ್.—ಮಾನ್ಯ ಬಾಳೆ ಕುಂದರಗಿಯವರು ಪ್ರಶ್ನೆ ಹಾಕುವುದಕ್ಕೆ ಮೊದಲು ಸ್ಟೇ ಕೊಡಿಸಿದ್ದರು. ಅವರು ಹಣವನ್ನು ಖರ್ಚು ಮಾಡಿ ೩-೪ ಕೆಲಸಗಳನ್ನು ಈಗಾಗಲೇ ಮುಗಿಸಿರುವುದರಿಂದಸ್ಟೇ ಕೊಟ್ಟರೆ ಸಿವಿಲ್ ಲಿಟಿಗೇಷನ್ ಆಗುತ್ತದೆ ಎನ್ನುವ ಕಾರಣದಿಂದಾಗಿ ಸ್ಟೇ ವೆಕೇಟ್ ಮಾಡಿಸಲಾಯಿತು.

ಶ್ರೀ ಎಸ್. ಆರ್, ಬೊಮ್ಮಾಯಿ,—ಇದರಲ್ಲಿ ಮುಖ್ಯವಾಗಿ ಪ್ರಶ್ನೆಗೆ ಮಾನ್ಯ ಸಚಿವರು ನೇರವಾಗಿ ಉತ್ತರವನ್ನು ಕೊಡುತ್ತಾ ಇಲ್ಲ. ಹಿಂದುಸ್ಥಾನ್ ಇಂಜಿನೀಯರಿಂಗ್ ವರ್ಕ್ಸ್ ಅವರು ಎಕ್ಸ್‌ಪೋರ್ಟ್ ಸ್ಟೀಲ್ ರೇಟಿಗೆ ಕೆಲಸವನ್ನು ಮಾಡುತ್ತೇವೆಂದು ಹೇಳಿದಮೇಲೆ ಎಂ. ಕೆ. ಕನ್‌ಸ್ಟ್ರಕ್ಷನ್. ಸಂಕೇಶ್ವರ ಇವರನ್ನು ನೆಗೊಶಿಯೇಷನ್ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಮೊದಲು ಅವರಿಗೆ ಕೊಡಬೇಕಾಗಿತ್ತು ಹಿಂದುಸ್ಥಾನ್ ಇಂಜಿನಿಯರಿಂಗ್ ವರ್ಕ್ಸ್‌ನವರು ಸ್ಟೀಲ್‌ರೇಟ್ ಜಾಸ್ತಿಯಾಗಿದೆ ಎಂದು ಮತ್ತು ನಿರ್ದಿಷ್ಟ ಪಡಿಸಿದ ವೇಳೆಗೆ ಕೆಲಸವನ್ನು ಪೂರೈಸುವ ಬಗ್ಗೆ ಸಂಶಯ ವ್ಯಕ್ತಪಡಿಸಿದರೆಂದು ಅವರನ್ನು ಕೈಬಿಡಲಾಯಿತು ಎಂದು ಹೇಳುತ್ತಿದ್ದೀರಿ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎ. ಬಿ. ಜಕನೂರ್.— ಸೆಪ್ಟೆಂಬರ್ ಆಖೈರ್ ಒಳಗೆ ಕೆಲಸ ಮುಗಿಸುವ ಪ್ರಯತ್ನಗಳು ನಡೆಯುತ್ತಿದೆ. ಮೆ॥ ಎಂ.ಕೆ. ಇಂಡಸ್ಟ್ರೀಸ್ ಕಂಪನಿಯವರಿಗೆ ಸಾಕಷ್ಟು ಅನುಭವ ಇದ್ದುದರಿಂದಲೂ ಮತ್ತು ಅವರು ನಿಗದಿಪಡಿಸಿದ ವೇಳೆಗೆ ಮುಗಿಸಿಕೊಡುತ್ತೇವೆಂದು ಹೇಳಿದ್ದರಿಂದಲೂ ಅವರನ್ನು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ನೆಗೊಸೀಯೇಷನ್ ಮಾಡಲಾಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.— ಟೆಂಡರ್ ಕರೆಯತಕ್ಕಂಥಾದ್ದು ಸೀಕ್ರೆಟ್ ಇರುತ್ತದೆ. ಈ ಮಧ್ಯೆ ಮೆ॥ ಎಂ.ಕೆ. ಇಂಡಸ್ಟ್ರೀಸ್‌ರವರನ್ನು ನೆಗೋಷಿಯೇಷನ್‌ಗೆ ಕರೆದದ್ದು ರೂಲ್ಸ್‌ಗೆ ವಿರೋಧವಾಗುವುದಿಲ್ಲವೇ?

ಶ್ರೀ ಎ. ಬಿ. ಜಕನೂರ್.— ಪಿಡಬ್ಲ್ಯೂಡಿ ರೂಲ್ಸ್‌ನಲ್ಲಿ ಅವಕಾಶವಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಜಾಸ್ತಿ ಮಾಡಿರತಕ್ಕಂಥ ನಿದರ್ಶನಗಳಿವೆ.

ಶ್ರೀ ಆರ್. ಸಿ. ಬಾಳೆಕುಂದರಗಿ.— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಾಕಷ್ಟು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.— ಈಗಾಗಲೇ ಮಾನ್ಯ ಸದಸ್ಯರಿಗೆ ಸಾಕಷ್ಟು ಅವಕಾಶವನ್ನು ಕೊಟ್ಟಿರುತ್ತೇನೆ. ಮತ್ತೆ ಮತ್ತೆ ಅದೇ ಪ್ರಶ್ನೆಯನ್ನು ಕೇಳುವುದರಲ್ಲಿ ಯಾವ ಪ್ರಯೋಜನವೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೆಲವು ಸಂದರ್ಭಗಳಲ್ಲಿ ಸಾಕಷ್ಟು ಅವಕಾಶವನ್ನು ಕೊಡುತ್ತೀರಿ. ಕೆಲವು ಸಂದರ್ಭಗಳಲ್ಲಿ ಅವಕಾಶವನ್ನೇ ಕೊಡುವುದಿಲ್ಲ. ಬೇಕಿದ್ದರೆ ಪ್ರಶ್ನೋತ್ತರ ವೇಳೆಗೆ ಮತ್ತಷ್ಟು ಕಾಲವನ್ನು ತೆಗೆದುಕೊಂಡರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಆರ್. ಸಿ. ಬಾಳೆಕುಂದರಗಿ.— ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕು. ನನಗೆ ಇಲ್ಲಿ ಸಂಶಯವೇನೆಂದರೆ, ನಾನು ಪ್ರಶ್ನೆಯನ್ನು ಕೊಟ್ಟ ಮೇಲೆ ಸಚಿವರು ಅಲ್ಲಿ ಹೋಗಿ ಸ್ಟೇ ವೆಕೇಟ್ ಮಾಡಿಸಿದ್ದಾರೆ. ಈ ರೀತಿ ಮಾಡಿರತಕ್ಕಂಥದ್ದು ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರತಕ್ಕಂಥದ್ದಾಗಿರುತ್ತದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ನಮ್ಮ ತಾಲ್ಲೂಕು ಮಟ್ಟದಲ್ಲಿಯ ಈ ಸಂಸ್ಥೆಯಲ್ಲಿ ಆರು ಲಕ್ಷ ರೂಪಾಯಿಗಳಷ್ಟು ಅವ್ಯವಹಾರ ನಡೆದಿದೆ. ಯಾರು ಇದಕ್ಕೆ ಕಾರಣವೆಂದು ಹೇಳುವುದಕ್ಕಾಗಿಲ್ಲ. ಇಲಾಖೆಯವರು ಮಾಡಿದ್ದಾರೆಯೋ, ಅಥವಾ ರಾಜಕಾರಣಿಗಳು ಮಾಡಿವ್ವಾರೆಯೋ ನಮಗೆ ಗೊತ್ತಾಗುತ್ತಿಲ್ಲ. ಅದು ನಮ್ಮ ಶ್ರೀಮತಿ ಇಂದಿರಾ ಗಾಂಧಿಯವರ ಪಕ್ಷದ ಸರ್ಕಾರ. ಗಂಡುಗಲಿ ಶ್ರೀ ಗುಂಡೂರಾವ್‌ರವರ ಸರ್ಕಾರಕ್ಕೆ ಕುಂದು ತರತಕ್ಕಂಥ ಕೆಲಸ ಮಾಡಲು ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗೆ ಖುದ್ದಾಗಿ ಪರಿಶೀಲನೆ ಮಾಡಿ ಸಭೆಯ ಮುಂದೆ ಯಾವಾಗ ಮಾಹಿತಿಯನ್ನು ಇಡುತ್ತಾರೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಬಿ. ಜಕ್ಕನೂರ್.— ಅಧಿಕಾರಿಗಳು ಪರಿಶೀಲನೆ ಮಾಡಿದ ನಂತರ ವಿವರಗಳನ್ನು ಕೊಡುತ್ತೇವೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.— ಶ್ರೀಯುತ ಬಾಳಿಕುಂದರಗಿಯವರು ನೇರವಾದ ಪ್ರಶ್ನೆ ಕೇಳಿದ್ದಾರೆ. ಇದರಲ್ಲಿ ೬ ಲಕ್ಷ ರೂಪಾಯಿಗಳ ಆವ್ಯವಹಾರ ನಡೆದಿದೆ. ಆದ್ದರಿಂದ ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ಈಗ ಮಾನ್ಯ ಸದಸ್ಯರು ವಿಷಯವನ್ನು ತಿಳಿಸಿದ್ದಾರೆ. ಆದರ ಬಗ್ಗೆ ವಿಚಾರಿಸುತ್ತೇವೆ.

ಶ್ರೀ ಆರ್. ಸಿ. ಬಾಳಿಕುಂದರಗಿ.— ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರಿ ಸಂಸ್ಥೆಗಳನ್ನು ಒಂದು ರೀತಿಯಾದ ತಾತ್ಸಾರ ಮನೋಭಾವನೆಯಿಂದ ನೋಡತಕ್ಕಂಥಾದ್ದು ನಡೆದುಕೊಂಡು ಬಂದಿದೆ. ಸಹಕಾರಿ ಸಂಸ್ಥೆಗಳಲ್ಲಿ ದುಡ್ಡನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಇದರಿಂದ ಸಹಕಾರಿ ಸಂಘಗಳಿಗೆ ಕೆಟ್ಟ ಹೆಸರು ಬರುತ್ತಿದೆ. ಶ್ರೀಮತಿ ಇಂದಿರಾ ಗಾಂಧಿಯವರಿಗಾಗಲೀ ಅಥವಾ ಶ್ರೀಮಾನ್ ಗುಂಡೂರಾವ್‌ರವರಿಗಾಗಲಿ ಕೆಟ್ಟ ಹೆಸರನ್ನು ತರಬೇಕು ಎನ್ನುವ ದಿಸೆಯಲ್ಲಿ ಈ ಅವ್ಯವಹಾರಗಳು ನಡೆಯುತ್ತಿವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬೇಕು. ಪ್ರಶ್ನೆ ಬರುವುದಕ್ಕೆ ಮುಂದೆ ಸ್ಟೇ ವೆಕೇಟ್ ಮಾಡಿಸಿದ್ದರೆ ಈ ಪ್ರಶ್ನೆಯೇ ಉದ್ಭವವಾಗುತ್ತಿರಲಿಲ್ಲ. ಪ್ರಶ್ನೆ ಹಾಕಿದಮೇಲೆ ಸ್ಟೇ ವೆಕೇಟ್ ಮಾಡಿಸಿರುವುದರಿಂದ ಇದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ಈಗ ಶ್ರೀಮಾನ್ ಬಾಳಿಕುಂದರಗಿಯವರು ಏನು ಹೇಳಿದ್ದಾರೆ, ಅದನ್ನೆಲ್ಲಾ ಪೂರ್ತಿಯಾಗಿ ಇಲಾಖೆಯವರು ವಿಚಾರ ಮಾಡಿಯೇ ಕಾನೂನು ಪ್ರಕಾರ ನೋಡಿಯೇ ಅತ್ಯಂತ ಲೋಯರ್ ಟೆಂಡರ್‌ಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಮತ್ತೆ ಮಾನ್ಯ ಸದಸ್ಯರು ತಮ್ಮ ಹತ್ತಿರ ಯಾವುದಾದರೂ ನಿರ್ದಿಷ್ಟವಾದ ಮಾಹಿತಿ ಇದ್ದರೆ ದಯಮಾಡಿ ಕೊಡಬೇಕು. ಮತ್ತೆ ಮಾನ್ಯ ಸದಸ್ಯರು ಸರ್ಕಾರಕ್ಕೆ ಕೆಟ್ಟ ಹೆಸರು ತರತಕ್ಕಂತಹ ಪ್ರಯತ್ನ ನಡೆದಿದೆ ಎಂಬುದಾಗಿ ಹೇಳಿದ್ದಾರೆ. ಆದರ ಬಗ್ಗೆ ವಿವರವಾಗಿ ತನಿಖೆ ನಡೆಸಿ ನಾನು ಬೇಕಾದರೆ ತಮ್ಮ ಮುಂದೆಯೂ ಅದನ್ನು ಇಡುತ್ತೇನೆ. ಮತ್ತೆ ಅವರಿಗೂ ಸಹಕಾರಿ ಮಂತ್ರಿಗಳ ಮೂಲಕ ಹೇಳಿಸುತ್ತೇನೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.— ಟೆಂಡರ್‌ದಾರರು ಅಸಮರ್ಥರಾಗಿರುವುದರಿಂದ ಅವರನ್ನು ಪಜಾ ಮಾಡಿದ್ದೇವೆ ಎಂಬುದಾಗಿ ಮಂತ್ರಿಗಳು ಹೇಳಿದರು ಟೆಂಡರ್‌ದಾರರು ಕಾಂಪಿಟ್ ಮಾಡುವುದಕ್ಕಿಂತ ಮುಂಚೆ ಅವರ ಸಾಮರ್ಥ್ಯವನ್ನು ಪರೀಕ್ಷೆ ಮಾಡಬೇಕಾಗಿತ್ತು. ಮತ್ತೆ ಕ್ಲಾಸ್ (೧) ಕ್ಲಾಸ್ (೨) ಕ್ಲಾಸ್ (೩) ಎಂಬುದಾಗಿ ಕಾಂಟ್ರಾಕ್ಟ್‌ದಾರರು ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ. ಆ ರೀತಿ ಇರುವುದರಿಂದ ಇವರು ಅವರ ಸಾಮರ್ಥ್ಯವನ್ನು ಪರೀಕ್ಷೆ ಮಾಡುವಂತಹ ಪ್ರಶ್ನೆ ಹೇಗೆ ಬಂತು? ಸಾಮರ್ಥ್ಯದ ಪ್ರಶ್ನೆ ಹೇಗೆ ಬಂತು ಎಂದರೆ ಮಂತ್ರಿಗಳು ಚೌಕಾಸಿ ಎಂಬ ಪದವನ್ನು ಪ್ರಯೋಗ ಮಾಡಿದ್ದಾರೆ. ಆ ರೀತಿ ಇವರು ಚೌಕಾಸಿ ಮಾಡುವುದು ಅಂದರೆ ಇದೇನು ಸೊಪ್ಪಿನ ವ್ಯಾಪಾರವೆ? ನೆಗೋಸಿಯೇಷನ್ ರೂಲ್ಸ್ ಏನಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಓದಿದ್ದಾರಾ? Has he followed the rules of negotiation? He has not followed. ಆದ್ದರಿಂದ ನಾನು ಕೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿ ಇದ್ದಾರೆ ಈ ಪ್ರಶ್ನೆ ಬಹಳ ಮಹತ್ವವಾದುದು. ಆದ್ದರಿಂದ ಇದನ್ನು ಅರ್ಧ ಗಂಟೆ ಚರ್ಚೆಗೆ ಬದಲಾವಣೆ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಆ ಸಮಯದಲ್ಲಿ ಇದಕ್ಕೆ ಸಂಬಂಧಪಟ್ಟಂತಹ ಎಲ್ಲ ವಿವರಗಳನ್ನೂ ಸಭೆಯ ಮುಂದೆ ಇಡಬೇಕು. ಇರ ತಕ್ಕಂತಹ ನಿಯಮಗಳನ್ನು ಗಾಳಿಗೆ ತೂರಿದ್ದಾರೆ.

(No answer)